# ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಉಪಸ್ಥಿತರು:- ಶ್ರೀ ಉಮೇಶ್ ಮೂಲಿಮನಿ, ಬಿ.ಕಾಂ.ಎಲ್‌ಎಲ್.ಬಿ.,
ಪ್ರ.ದ.ನ್ಯಾ ದಂಡಾಧಿಕಾರಿಗಳು, ಹರಪನಹಳ್ಳಿ

ಸಿ.ಸಿ. ನಂ:-140 / 2004
ದಿನಾಂಕ: 6-9-05

237
4-9-08

ಫಿರ್ಯಾದಿದಾರರು :- ರಾಜ್ಯದ ಪರವಾಗಿ,
ಕಾರ್ಮಿಕ ನಿರೀಕ್ಷಕರು,
ಹರಪನಹಳ್ಳಿ,
(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ:- ಬಸವರಾಜ ತಂದೆ ಬಸವರಾಜ,
ಮೆ: ಬಸವರಾಜ ಗ್ಯಾರೇಜ್‌ನ ಮಾಲೀಕರು,
ಐ.ಬಿ.ಸರ್ಕಲ್, ಹರಪನಹಳ್ಳಿ
(ಶ್ರೀ ಬಿ.ಆರ್.ಟಿ. ವಕೀಲರು)

20
29/8/12

ಕಾರ್ಮಿಕ ನಿರೀಕ್ಷಕರು ಹರಪನಹಳ್ಳಿ ಇವರು ಆರೋಪಿಯು ವಿರುದ್ಧ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ನಿಯಮ 1995 ರ ಕಲಂ 3ರ ಉಲ್ಲಂಘನೆ ಮಾಡಿ 14(1) ರಡಿಯಲ್ಲಿ ದಂಡಿಸಬಹುದಾದ ಅಪರಾಧವೆಸಗಿರುವುದಾಗಿ ಆಪಾದಿಸಿರುತ್ತಾರೆ. ಫಿರ್ಯಾದಿದಾರರ ದೂರಿನ ಸಾರಾಂಶ ಕೆಳಗಿನಂತೆ ಇದೆ.

ಫಿರ್ಯಾದಿದಾರರು ದಿ ೯-೭-03 ರಂದು ಬೆಳಿಗ್ಗೆ, 11-10 ರ ಸಮಯದಲ್ಲಿ ಹರಪನಹಳ್ಳಿಯಲ್ಲಿರುವ ಆರೋಪಿಯ ಗ್ಯಾರೇಜಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಆರೋಪಿಯು ಆತನ ಗ್ಯಾರೇಜನಲ್ಲಿ ಅನ್ವರ್ ಎಂಬ 14 ವರ್ಷಕ್ಕಿಂತ ಕಡಿಮೆ ವಯಸ್ಸಾಗಿದ್ದ 9 ವರ್ಷದ ಬಾಲಕನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು, ಆದ್ದರಿಂದ ಆರೋಪಿಯು ಮೇಲಿನಂತೆ ಅಪರಾಧವೆಸಗಿದ್ದಾರೆಂದು ಆಪಾದಿಸಿರುತ್ತಾರೆ.

ಆರೋಪಿಗೆ ಸಮನು ನೀಡಲಾಗಿ ಆತ ಹಾಜರಾಗಿದ್ದು ಆತನಿಗೆ ದಂ ಪ್ರ ಕಲಂ 207 ರಡಿ ದಾಖಲೆಗಳ ನಕಲು ಒದಗಿಸಿದೆ, ನಂತರ ಆರೋಪಿಯ ವಿರುದ್ಧ ಅಪರಾಧದ ಸಂಜ್ಞೆ ತೆಗೆದುಕೊಂಡಿದೆ.

Court of the Judicial Magistrate, First Class, Harapanahalli.

ನಂತರ ಆರೋಪಿಯ ವಿರುದ್ಧ ಆಪಾದನೆಯನ್ನು ರಚಿಸಿ ಓದಿ ಹೇಳಲಾಗಿ ಆರೋಪಿಯು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಆತನನ್ನು ವಿಚಾರಣೆಗೆ ಗುರಿಪಡಿಸಿದೆ. ಆರೋಪಿಯ ವಿರುದ್ಧದ ಆಪಾದನೆಯನ್ನು ಸಾಬೀತುಪಡಿಸಲು ಅಭಿಯೋಜನೆಯ ಪರವಾಗಿ ಪ್ರಾ.ಸಾ.1 ರಿಂದ 4 ಸಾಕ್ಷಿದಾರರಿಗೆ ವಿಚಾರಿಸಿ ನಿ ಪಿ 1 ರಿಂದ 4 ದಾಖಲೆಗಳನ್ನು ಗುರ್ತಿಸಿದೆ. ಸಾಕ್ಷಿ ವಿಚಾರಣೆ ನಂತರ ದಂ ಪ್ರ ಕಲಂ 313 ರಡಿ ಆರೋಪಿಯ ಹೇಳಿಕೆಯನ್ನು ದಾಖಲಿಸಿದೆ ಆರೋಪಿಯು ಅಭಿಯೋಜನೆಯ ಸಾಕ್ಷ್ಯವನ್ನು ಅಲ್ಲಗೆಳೆದು ತನ್ನ ಪರ ಸಾಕ್ಷ್ಯ ಇಲ್ಲವೆಂದು ಹೇಳಿದ್ದರಿಂದ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ.

ಉಭಯ ಪರ ವಾದ ಕೇಳಿದೆ ಹಾಗೂ ದಾಖಲೆಗಳನ್ನು ಪರಿಶೀಲಿಸಿದೆ. ಆದರಿಂದ ಈ ಕೆಳಕಂಡ ಅಂಶಗಳು ನನ್ನ ಇತ್ಯರ್ಥಕ್ಕೆ ಉದ್ಭವಿಸಿವೆ.

## <u>ಅಂಶಗಳು</u>

ಅಂಶ 1. ಅಭಿಯೋಜನೆಯು ಆರೋಪಿಯ ವಿರುದ್ಧ ನಿಸ್ಸಂಶಯವಾಗಿ ಆತ ಬಾಲ ಕಾರ್ಮಿಕರ( ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಕರ್ನಾಟಕ ಅಧಿನಿಯಮ 1995 ರ ಕಲಂ 3 ರ ಉಲ್ಲಂಘನೆ ಮಾಡಿ ಸದರಿ ಕಾಯ್ದೆ ಕಲಂ 14(1)ರಡಿ ಅಪರಾಧ ವೆಸಗಿರುವುದಾಗಿ ಸಾಬೀತುಪಡಿಸಿದೆಯು?

ಅಂಶ 2. ಆದೇಶವೇನು?

ಮೇಲಿನ ಅಂಶಗಳಿಗೆ ನನ್ನ ನಿರ್ಣಯ ಕೆಳಗಿನಂತೆ ಇದೆ.

ಅಂಶ 1 ಸಕಾರಾತ್ಮಕವಾಗಿ
ಅಂಶ 2. ಅಂತಿಮ ಆದೇಶದಂತೆ.

ಮೇಲಿನ ನಿರ್ಣಯಕ್ಕೆ ಕಾರಣಗಳು ಕೆಳಗಿನಂತೆ ಇದೆ.

## <u>ಕಾರಣಗಳು</u>

<u>ಅಂಶ 1</u> 1. ಅಭಿಯೋಜನೆಯ ಕಥೆಯ ಸಾರಾಂಶ ಎಂದರೆ- ಫಿರ್ಯಾದಿದಾರರು ತಮ್ಮ ಬಾಲ ಕಾರ್ಮಿಕ ನಿಷೇಧ ತಂಡದೊಂದಿಗೆ ದಿನಾಂಕ 9-9-03 ರಂದು ಬೆಳಿಗ್ಗೆ 11--10 ರ ಸಮಯದಲ್ಲಿ ಆರೋಪಿಯ ಸಂಸ್ಥೆಗೆ ಭೇಟಿ ನೀಡಿ ಪರಿಶೀಲಿಸಿದಾಗ ಆರೋಪಿಯು ಅವರ ಹರಪನಹಳ್ಳಿ ಐ ಬಿ

ವೃತ್ತದಲ್ಲಿರುವ ಬಸವರಾಜ ಆಟೋ ಗ್ಯಾರೇಜಿನಲ್ಲಿ ಅನ್ವರ್ ಎಂಬ ಎಂಬ ಅಪ್ರಾಪ್ತ ಬಾಲಕನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದು ಆರೋಪಿಯು ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ 1986 ಕರ್ನಾಟಕ ಅಧಿನಿಯಮ 1995ರ ಕಲಂ 3 ರ ಉಲ್ಲಂಘನೆ ಮಾಡಿ 14(1) ರಡಿಯಲ್ಲಿ ಅಪರಾಧವೆಸಗಿದ್ದಾಗಿ ಹೇಳಲಾಗಿದೆ. (ಇನ್ನು ಮುಂದೆ ಅಧಿನಿಯಮ ಎಂದು ಉಲ್ಲೇಖಿಸಲಾಗುವುದು.) ಇದನ್ನು ಸಾಬೀತು ಮಾಡಲು ಅಭಿಯೋಜನೆಯು 4 ಸಾಕ್ಷಿದಾರರನ್ನು ವಿಚಾರಿಸಿ 4 ದಾಖಲೆಗಳನ್ನು ಹಾಗೂ ಸಂಬಂಧಪಟ್ಟ ಸಹಿಗಳನ್ನು ಗುರ್ತಿಸಿದೆ.

ಎರಡೂ ಬದಿಯ ವಾದಗಳನ್ನು ಆಲಿಸಿದೆ. ಫಿರ್ಯಾದಿದಾರರ ಪರವಾಗಿ ಸ.ಸ.ಅ.ರವರು ತಮ್ಮ ವಾದ ಮುಂದಿಸುತ್ತಾ, ಎಲ್ಲಾ ಸಾಕ್ಷಿದಾರರೂ ಸುಸಂಗತವಾಗಿ ಸಾಕ್ಷ್ಯ ನೀಡಿದ್ದಾರೆ, ಮೇಲಾಗಿ, ಈ ತಂಡವು ಆರೋಪಿಯ ಗ್ಯಾರೇಜಿಗೆ ಭೇಟಿ ನೀಡಿದ ಅಂಶವನ್ನು ತಮ್ಮ ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ಒಪ್ಪಿದ್ದಾರೆ, ಅಲ್ಲದೇ ಈ ಆರೋಪಿ ಗ್ಯಾರೇಜನ್ನು ನಡೆಸುತ್ತಿರುವುದನ್ನು ಒಪ್ಪಿಕೊಳ್ಳಲಾಗಿದೆ, ಈ ಕಾರಣದಿಂದ ಈ ಅಂಶಗಳ ಬಗ್ಗೆ ಅಂದರೆ ಫಿರ್ಯಾದಿದಾರರು ಆರೋಪಿಯ ಸಂಸ್ಥೆಗೆ ಭೇಟಿ ನೀಡಿದಬಗ್ಗೆ ವಿವಾದ ಇಲ್ಲ, ಇದಕ್ಕೆ ಮಿಗಿಲಾಗಿ, ಬಾಲಕಾರ್ಮಿಕನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರ ಬಗ್ಗೆ ಹೇಳುವುದಾದರೆ, ಬಾಲಕ ಕಟ್ಟೆಯ ಮೇಲೆ ಆಟವಾಡುತ್ತಿದ್ದ ಆತನಿಗೆ ಹಿಡಿದು ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ಆಧರಿಸಲಾಗಿದೆ, ಆದರೆ ಈ 4 ಜನ ಸಾಕ್ಷಿದಾರರು ಸುಸಂಗತವಾದ ಸಾಕ್ಷ್ಯ ನೀಡಿದ್ದಾರೆ, ಮೇಲಾಗಿ, ಬಾಲಕನಿಗೆ 14 ವರ್ಷಕ್ಕೂ ಹೆಚ್ಚು ವಯಸ್ಸು ಆಗಿದ್ದುದಾಗಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ, ಮತ್ತು ಆರೋಪಿ ತನ್ನ ಪರ ಯಾವುದೇ ಸಾಕ್ಷ್ಯಪುರಾವೆಗಳನ್ನು ಹಾಜರುಪಡಿಸದಿರುವ ಕಾರಣ ಅಭಿಯೋಜನೆಯು ಆರೋಪಿಯ ವಿರುದ್ಧದ ಆಪಾದನೆಯನ್ನು ನಿಸ್ಸಂಶಯವಾಗಿ ಸಾಬೀತುಪಡಿಸಿರುತ್ತದೆ, ಕಾರಣ ಆರೋಪಿಗೆ ಗರಿಷ್ಠ ಪ್ರಮಾಣದ ಶಿಕ್ಷೆ ವಿಧಿಸುವಂತೆ ಕೋರಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ, ಆರೋಪಿ ಪರ ವಕೀಲರು ತಮ್ಮ ವಾದ ಮುಂದಿಸುತ್ತಾ, ತಂಡದ ಭೇಟಿ ಕಾಲಕ್ಕೆ ಯಾವುದೇ ಪಂಚನಾಮೆ ಮಾಡಿಲ್ಲ, ಹಾಗೂ ಸಾರ್ವಜನಿಕರ ಹೇಳಿಕೆಗಳನ್ನು ಪಡೆದಿಲ್ಲ, ಮೇಲಾಗಿ, ಗ್ಯಾರೇಜಿನ ಪಕ್ಕದಲ್ಲಿ ಒಂದು ನಾಗರಕಟ್ಟೆ ಇದೆ, ಅಲ್ಲಿ ಸದಾಕಾಲ ಹುಡುಗರು ಜನರು ಇರುತ್ತಾರೆ, ಅಂತಹ ಸಾರ್ವಜನಿಕರ ಪೈಕಿ ಯಾವುದೇ ಒಬ್ಬ ಸಾಕ್ಷಿದಾರರನ್ನು ವಿಚಾರಿಸಿಲ್ಲ, ಸುಳ್ಳು ಪ್ರಕರಣ ದಾಖಲಿಸಲಾಗಿದೆ, ಮೇಲಾಗಿ, ಆರೋಪಿಯ ವಿರುದ್ಧ ಸಹಾಯಕ ಕಾರ್ಮಿಕ ಕಮೀಷನರ್ ದಾವಣಗೆರೆ ಇವರು ಇನ್ನೊಂದು ಮೊಕದ್ದಮೆ ಹೂಡಿದ್ದು ಅದರಲ್ಲಿ ಬಾಲಕನ ಪಾಲಕರು ಬಾಲಕ

Court of the Judicial Magistrate, First Class, Harapanahalli.

ಅಸ್ಗಾರ್ ಈತನ ವಯಸ್ಸು 14 ವರ್ಷಕ್ಕಿಂತ ಹೆಚ್ಚು ಎಂಬುದರ ಬಗ್ಗೆ ದಾಖಲೆಯನ್ನು ಒದಗಿಸಿದ್ದಾರೆ. ಈ ಬಗ್ಗೆ ಪ್ರಾ ಸಾ 1 ನೇ ದವರು ತಮ್ಮ ಪಾಟೀ ಸವಾಲಿನಲ್ಲಿ ಸಹ ಒಪ್ಪಿದ್ದಾರೆ. ಹೀಗಾಗಿ, ಬಾಲಕನಿಗೆ 14 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದ್ದದ್ದು ಸ್ಪಷ್ಟವಾಗುತ್ತದೆ. ಅಲ್ಲದೇ ಆರೋಪಿಯು ಸಣ್ಣ ಗ್ಯಾರೇಜನ್ನು ನಡೆಸುತ್ತಿದ್ದು ಅವರಲ್ಲಿ ಯಾವುದೇ ಕೂಲಿ ಕೆಲಸಗಾರರು ಇರುವುದಿಲ್ಲ, ಮೇಲಾಗಿ ಆರೋಪಿಯು ಯಾವುದೇ ನಿಯಮ ಉಲ್ಲಂಘನೆ ಮಡಿಲ್ಲ, ಕಾರಣ ಆರೋಪಿಯನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಎರಡೂ ಬದಿಯ ವಾದಗಳನ್ನು ಹಾಗೂ ಕಡತದಲ್ಲಿರುವ ಸಾಕ್ಷ್ಯಪುರಾವೆಗಳನ್ನು ಪರಿಶೀಲಿಸಿದೆ. ಪ್ರಾಥಮಿಕವಾಗಿ ಸ.ಸ.ಅ.ರವರು ತಮ್ಮ ವಾದದಲ್ಲಿ ಎರಡು ಅಂಶಗಳ ಬಗ್ಗೆ ಅಂದರೆ ದಿ 9-9-03 ರಂದು ಬೆಳಿಗ್ಗೆ 11-10ರ ಸಮಯದಲ್ಲಿ ತನಿಖಾ ತಂಡವು ಆರೋಪಿಯ ಗ್ಯಾರೇಜಿಗೆ ಬೇಟಿ ನೀಡಿದ್ದನ್ನು ಆರೋಪಿ ಒಪ್ಪಿದ್ದಾರೆಂದು, ಎರಡನೆಯದಾಗಿ ಹರಪನಹಳ್ಳಿಯ ಬಿ.ಬಿ.ವೃತ್ತದಲ್ಲಿ ಆರೋಪಿಯ ಗ್ಯಾರೇಜು ಇರುವುದನ್ನು ಆರೋಪಿ ಒಪ್ಪಿದ್ದಾರೆಂದು ಹೇಳಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಅಭಿಯೋಜನೆಯ ಪರ ವಿಚಾರಿಸಿದ ಸಾಕ್ಷ್ಯಪುರಾವೆಗಳನ್ನು ಪರಿಶೀಲಿಸೋಣ.

ಪ್ರಾ.ಸಾ.1 ಮಂಜುನಾಥ , ಕಾರ್ಮಿಕ ನಿರೀಕ್ಷಕರು ಇವರ ಸಾಕ್ಷ್ಯದಿಂದ ಕಂಡು ಬರುವುದೇನೆಂದರೆ. ದಿ 9-9-03 ರಂದು ಬೆಳಿಗ್ಗೆ 11-10 ಗಂಟೆಗೆ ಅವರ ತಂಡ ಆರೋಪಿಯ ಬಾಬ್ತು ಮೆ॥ ಬಸವರಾಜ ಆಟೋ ಗ್ಯಾರೇಜಿಗೆ ಭೇಟಿ ನೀಡಿತು, ಅಲ್ಲಿ ಅಸ್ಗಾರ್ ಎಂಬ 9 ವರ್ಷದ ಬಾಲಕ ಕೆಲಸಕ್ಕೆ ಇದ್ದ , ಆ ಬಾಲಕನಿಗೆ ವಿಚಾರಿಸಿದಾಗ ಆತ ಪ್ರತಿದಿನ 10 ರೂ.ಗಳ ದಿನಗೂಲಿಯಂತೆ ಕೆಲಸ ಮಾಡುತ್ತಿರುವುದಾಗಿ ಹೇಳಿದ. ಆತನ ಹೇಳಿಕೆ ಪಡೆದು ಆತನ ಸಹಿ ಸಹ ಪಡೆದಿದ್ದಾಗಿ ಹೇಳಿದ್ದಾರೆ. ಅಲ್ಲದೇ ಗ್ಯಾರೇಜಿನ ಮಾಲೀಕರಿಗೆ ಅದರ ಪ್ರತಿಯನ್ನು ನೀಡಿ ಅವರ ಸಹಿ ಸಹ ಪಡೆದಬಗ್ಗೆ ನುಡಿದಿದ್ದಾರೆ. ಈ ಬಗ್ಗೆ ನಿ ಪಿ 1ನ್ನು ಹಾಜರುಪಡಿಸಲಾಗಿದೆ. ಅಲ್ಲದೇ ನಿ ಪಿ 1 ರ ಮೇಲೆ ತಮ್ಮ ಸಹಿಯನ್ನು. ಮಾಡಿದ್ದಾರೆ. ಅದರಲ್ಲಿ ಆರೋಪಿಯು ಸಹಿಯನ್ನು ಅಲ್ಲದೇ ಇತರ ತಂಡದ ಸದಸ್ಯರ ಸಹಿಗಳನ್ನು ಪಡೆದಿದ್ದಾರೆ. ನಿ ಪಿ 3 ಇದು ಬಾಲಕಾರ್ಮಿಕನ ಹೇಳಿಕೆಯಾಗಿದ್ದು ಅದರಲ್ಲಿರುವ ಸಹಿಗಳನ್ನೂ ಸಹ ಗುರ್ತಿಸಿದ್ದಾರೆ. ಆ ಬಾಲಕ ಹಾಕಿರುವ ಹೆಬ್ಬೆಟ್ಟಿನ ಗುರುತು ಸಹ ಗುರ್ತಿಸಿದ್ದಾರೆ. ಇನ್ನು ಪಾಟೀ ಸವಾಲಿನಲ್ಲಿ ಕಂಡು ಬರುವುದೇನೆಂದರೆ ಗ್ಯಾರೇಜಿನ ಹತ್ತಿರ ನಾಗರಕಟ್ಟೆ ಇದೆ, ಎಂದು ಒಪ್ಪಿದ್ದಾರೆ. ಅಲ್ಲಿ ಸಾರ್ವಜನಿಕರು, ಹುಡುಗರು ಇರುತ್ತಾರೆಂದು ಒಪ್ಪಿದ್ದಾರೆ. ಆದರೆ ದಿ 9-9-03 ರಂದು

ಅನ್ವಾರ ಎಂಬ ಬಾಲಕ ಅಲ್ಲಿ ಆಟವಾಡುತ್ತಿದ್ದ ಎಂಬ ಸೂಚನೆಯನ್ನು ಅಲ್ಲಗೆಳೆದಿದ್ದಾರೆ. ಹಾಗೂ ಈ ಆರೋಪಿ ಯಾವುದೇ ಬಾಲಕಾರ್ಮಿಕರಿಗೆ ನೇಮಿಸಿಕೊಂಡಿರಲಿಲ್ಲವೆಂಬುದನ್ನೂ ಸಹ ಅಲ್ಲಗೆಳೆದಿದ್ದಾರೆ. ಹೀಗಾಗಿ, ಒಟ್ಟಾರೆ ಇವರ ಸಾಕ್ಷ್ಯದಿಂದ ಕಂಡು ಬರುವುದೇನೆಂದರೆ ದಿ ೨.೨.೦೩ ರಂದು ತನಿಖಾಧಿಕಾರಿಗಳು ತಮ್ಮ ತನಿಖಾ ತಂಡದ ಜೊತೆಗೆ ಆರೋಪಿಯ ಗ್ಯಾರೇಜಿಗೆ ಭೇಟಿ ನೀಡಿದ ವಿಷಯ ಸ್ಪಷ್ಟವಾಗುತ್ತದೆ. ಏಕೆಂದರೆ ಅಲ್ಲಿ ಗ್ಯಾರೇಜು ಇರುವುದನ್ನು ಪಾಟೀ ಸವಾಲಿನ ಸೂಚನೆಯಿಂದಲೇ ಆರೋಪಿ ಒಪ್ಪಿದ್ದು ಆ ಗ್ಯಾರೇಜಿನ ಬಳಿ ನಾಗರಕಟ್ಟೆ ಇರುವುದನ್ನೂ ಸಹ ಒಪ್ಪಿದ್ದಾರೆ. ಹೀಗಾಗಿ ಆರೋಪಿ ಗ್ಯಾರೇಜು ನಡೆಸುವ ವಿಷಯ ನಿರ್ವಿವಾದ. ,ಮೇಲಾಗಿ ರಕ್ಷಣಾತ್ಮಕವಾಗಿ, ಈ ಆರೋಪಿ ಪ್ರಾ, ಸಾ 1 ರಿಗೆ ಪಾಟೀ ಸವಾಲಿನಲ್ಲಿ, ತಮ್ಮ ನಿಲುವನ್ನು ಸೂಚಿಸುವ ಮೂಲಕ ರಕ್ಷಣೆ ಪಡೆಯಲು ನೋಡಿದ್ದಾರೆ, ಅದೇನೆಂದರೆ ಅನ್ವಾರ್ ಅಲ್ಲಿ ನಾಗರಕಟ್ಟೆ ಹತ್ತಿರ ಆಟ ಆಡುತ್ತಿದ್ದ ಒಂದು ವೇಳೆ ಬಾಲಕ ಅನ್ವಾರ್ ಸದರಿ ನಾಗರಕಟ್ಟೆ ಹತ್ತಿರ ಆಟ ಆಡುತ್ತಿದ್ದರೆ ಆ ಬಗ್ಗೆ ಆರೋಪಿಯು ಯಾವುದೇ ಸಾಕ್ಷ್ಯ ಪುರಾವೆಗಳನ್ನು ನೀಡಿಲ್ಲ, ಹೀಗಾಗಿ ಅನ್ವಾರ್ ಅಲ್ಲಿ ಆಟವಾಡುತ್ತಿದ್ದ ವಿಷಯ ಕೇವಲ ರಕ್ಷಣಾತ್ಮಕ ಸೂಚನೆಯಾಗಿ ಮಾತ್ರ ಉಳಿದಿದೆ, ಆದರೆ ಆರೋಪಿ ಇಂತಹ ಸೂಚನೆ ಮೂಲಕ ಅನ್ವಾರ್ ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದನೋ? ಅಥವಾ ನಾಗರಕಟ್ಟೆ ಹತ್ತಿರ ಆಟ ಆಡುತ್ತಿದ್ದನೋ? ಎಂಬ ದ್ವಂದ್ವಕ್ಕೆ ನ್ಯಾಯಾಲಯ ಒಳಗಾಗಲು ಆರೋಪಿ ಪ್ರಯತ್ನಿಸಿದ್ದು ಇಂತಹ ಸೂಚನೆಯಿಂದ ಇಲ್ಲಿ ಅಂತಹ ಯಾವುದೇ ದ್ವಂದ್ವ ಉತ್ಪನ್ನವಾಗುವುದಿಲ್ಲ, ಬದಲಿಗೆ ಆರೋಪಿ ತನ್ನ ರಕ್ಷಣಾತ್ಮಕ ನಿಲುವಿನ ಬಗ್ಗೆ ಸೂಕ್ತ ಸಾಕ್ಷ್ಯಪುರಾವೆಗಳ ಮೂಲಕ ಸಾಬೀತುಪಡಿಸಬೇಕಾಗುತ್ತದೆ. ಆದರೆ ಆರೋಪಿ ಅಂತಹ ಕ್ರಮ ತೆಗೆದುಕೊಂಡಿರುವುದಿಲ್ಲ, ಮುಂದುವರೆದ ಪಾಟೀ ಸವಾಲಿನಲ್ಲಿ ಆರೋಪಿಯ ಸೂಚನೆ ಎಂದರೆ ಬಾಲಕ ಅನ್ವಾರನ ಪಾಲಕರು ಬಾಲಕ ಅನ್ವಾರನಿಗೆ 14 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿತ್ತು ಎಂಬುದಾಗಿ ದಾವಣಗೆರೆಯ ಕಾರ್ಮಿಕ ಆಯುಕ್ತರ ಮುಂದೆ ದಾಖಲೆ ಹಾಜರುಪಡಿಸಿದ್ದಾಗಿ ಹೇಳಿದ್ದಾರೆ, ಪುನಹ ಇಲ್ಲಿಯೂ ಇದು ಕೇವಲ ಸೂಚನೆಯಾಗಿದೆಯೇ ಹೊರತು ಇದನ್ನು ಸಾಬೀತುಪಡಿಸಲೂ ಸಹ ಆರೋಪಿ ಯಾವುದೇ ಕ್ರಮ ಕೈಗೊಂಡಿಲ್ಲ, ಹಾಗೂ ಬಾಲಕನ ಪಾಲಕರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ, ಸದರಿ ಪ್ರಕರಣ ವಿಚಾರಣೆಯಲ್ಲಿ ಇರುವುದಾಗಿ ಸಾಕ್ಷಿ ಒಪ್ಪಿದ್ದರೂ ಅದರಲ್ಲಿ ಹಾಜರುಪಡಿಸಿದ ದಾಖಲೆ ಅಧಿಕೃತ ಪ್ರಾಧಿಕಾರ ನೀಡಿದ ದಾಖಲೆ ಅಲ್ಲವೆಂದು ನುಡಿದಿದ್ದಾರೆ. ಈ ಕಾರಣದಿಂದ ಇದನ್ನು ಆರೋಪಿಯೇ ಸಾಬೀತುಪಡಿಸಬೇಕಾಗಿದ್ದು ಆ ಬಗ್ಗೆ ಸಹ ಆರೋಪಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ಕೇವಲ ಪಾಟೀ ಸವಾಲಿನಲ್ಲಿನ ಸೂಚನೆ ಮಾತ್ರದಿಂದ ಬಾಲಕನ ವಯಸ್ಸು 14 ವರ್ಷಕ್ಕಿಂತ ಹೆಚ್ಚಾಗಿತ್ತು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ, ಇದಕ್ಕೆ ವ್ಯತಿರಿಕ್ತವಾಗಿ ಕೇವಲ

Court of the Judicial Magistrate ... Harapanahalli

ನ್ಯಾಯಾಲಯಕ್ಕೆ ಸಂಶಯ ಉತ್ಪನ್ನ ಮಾಡುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ, ಆದರೆ ಅಂತಹ ಯಾವುದೇ ಸಂಶಯವೇನೂ ಇಲ್ಲಿ ಉತ್ಪನ್ನವಾಗುವುದಿಲ್ಲ. ಅಂತಹ ಸಂಶಯ ಮೂಡಿಸುವ ಪ್ರಯತ್ನದಲ್ಲಿ ಸಹ ಆರೋಪಿ ವಿಫಲರಾಗಿದ್ದಾರೆ. ಒಟ್ಟಾರೆ ಪ್ರಾ ಸಾ 1ರ ಸಾಕ್ಷ್ಯದಿಂದ ಕಂಡು ಬರುವುದೇನೆಂದರೆ ಅವರು ಆರೋಪಿಯ ಗ್ಯಾರೇಜಿಗೆ ಭೇಟಿ ನೀಡಿದರು. ಆಗ ಅಲ್ಲಿ ಅಸ್ಗರ್ ಎಂಬ 9 ವರ್ಷದ ಬಾಲಕ ಕೆಲಸ ಮಾಡುತ್ತಿದ್ದ ಎಂಬುದು ಸ್ಪಷ್ಟವಾಗಿದ್ದು ಈ ಬಗ್ಗೆ ನಿ ಪಿ 1 ರಿಂದ 3 ದಾಖಲೆಗಳೂ ಸಹ ಅದಕ್ಕೆ ಪುಷ್ಟಿನೀಡುತ್ತವೆ. ಪ್ರಾ ಸಾ 1 ಇವರು ಆರೋಪಿಯ ಸಹಿಯನ್ನು ನಿ ಪಿ 1 ಬಿ ಮತ್ತು ನಿ ಪಿ 3 ಎ ಎಂದು ಗುರ್ತಿಸಿದ್ದಾರೆ. ಹೀಗಾಗಿ, ಈ ಎರಡೂ ದಾಖಲೆಗಳನ್ನು ನಿ ಪಿ 1 ಮತ್ತು 3ನ್ನು ಆರೋಪಿಯ ಗ್ಯಾರೇಜಿಗೆ ಭೇಟಿ ನೀಡಿದ ಸಮಯದಲ್ಲಿ ತಯಾರಿಸಿದ್ದು ಆಗ ಅಲ್ಲಿ ಆರೋಪಿ ಹಾಜರು ಇದ್ದ ಮತ್ತು ಆತನ ಸಹಿಯನ್ನು ಆಗ ಪಡೆದಿದೆ ಎಂದು ಸ್ಪಷ್ಟವಾಗುತ್ತದೆ. ಮತ್ತು ಅದರ ಒಂದು ಪ್ರತಿಯನ್ನು ಆರೋಪಿಗೂ ಸಹ ಆಗಲೇ ನೀಡಿರುತ್ತಾರೆ, ಹಾಗಿರುವಾಗ ಇಲ್ಲಿ ಪಂಚರ ಸಾಕ್ಷಿಗಳ ಸಹಿ ಪಡೆಯುವ ಸಂದರ್ಭವೇ ಉಂಟಾಗುವುದಿಲ್ಲ. ಮತ್ತು ಅದರ ಅವಶ್ಯಕತೆ ಸಹ ಕಂಡು ಬರುವುದಿಲ್ಲ. ಏಕೆಂದರೆ ಈ ಆರೋಪಿಯು ರಕ್ಷಣಾತ್ಮಕವಾಗಿ ಆ ನೋಟೀಸು ಜಾರಿ ಮಾಡಿದ ದಿನ ಆ ದಾಖಲೆಗೆ ಸಹಿ ಪಡೆದಿದ್ದಾರೆಂಬುದಾಗಿ ಆರೋಪಿಸಿದ್ದು ಅದನ್ನು ಆರೋಪಿಯೇ ಸಾಬೀತುಪಡಿಸ ಬೇಕಾಗುತ್ತದೆ. ಆದರೆ ಇಂತಹ ಒಂದು ಸೂಚನೆಯಿಂದ ಕಂಡು ಬರುವುದೇನೆಂದರೆ ನಿ ಪಿ 1 ರಿಂದ 3 ರ ಮೇಲೆ, ಈ ಮೇಲೆ ಉಲ್ಲೇಖಿಸಿದ ಸಹಿಗಳನ್ನು ಪ್ರಾ ಸಾ 1 ನೇದವರು ಗುರ್ತಿಸಿದ್ದು ಆ ಸಹಿಗಳನ್ನು ಆರೋಪಿಯು ಒಪ್ಪಿದ್ದಾರೆ, ಹಾಗಿರುವಾಗ ಈ ಆರೋಪಿಯು ವ್ಯತಿರಿಕ್ತವಾಗಿ ದಿ 9.9.03 ರಂದು ಈ ತಂಡದವರು ತನ್ನ ಗ್ಯಾರೇಜಿಗೆ ಭೇಟಿ ನೀಡಿದ ವಿಷಯವನ್ನು ಒಪ್ಪಿದ್ದಾರೆ. ಆದರೆ ಆ ದಿವಸ ಅವರು ಸಹಿ ಹಾಕಿಲ್ಲ, ಆದರೆ ಬೇರೆ ದಿವಸ ಅವರ ಸಹಿ ಪಡೆಯಲಾಗಿದೆ ಎಂದು ಹೇಳಿದ್ದಾರೆ. ಆದರೆ ಸಹಿಗಳ ಬಗ್ಗೆ ಮಾತ್ರ ಯಾವುದೇ ವಿವಾದ ಇಲ್ಲ. ಈ ಕಾರಣದಿಂದ ಈ ಆರೋಪಿಯು ದಿ 9.9.03 ರಂದು ಆ ಸಹಿಗಳನ್ನು ಮಾಡದೇ , ಸದರಿ ನಿ ಪಿ 1 (ಬಿ) ಮತ್ತು ನಿ ಪಿ 3 ಸಹಿಗಳನ್ನು ಬೇರೆ ದಿವಸ ಮಾಡಿದ್ದರೆ ಅದನ್ನು ಸಾಬೀತುಪಡಿಸುವ ಹೊಣೆ ಆರೋಪಿಯಮೇಲಿರುತ್ತದೆ. ಈ ಕಾರಣದಿಂದ ಪ್ರಾ ಸಾ ರ ಸಾಕ್ಷ್ಯವು ಸ್ಥಿರವಾಗಿ ನಿಂತಿದೆ. ಇವರ ಸಾಕ್ಷ್ಯವನ್ನು ಸಂಶಯದಿಂದ ನೋಡಲು ಯಾವುದೇ ಕಾರಣಗಳು ಇರುವುದಿಲ್ಲ.

ಪ್ರಾ ಸಾ 2 ಮಂಜುನಾಥ ಇವರು ಸದರಿ ತಪಾಸಣಾ ತಂಡದ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು ಇವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಕಂಡು ಬರುವುದೇನೆಂದರೆ, ದಿ 9.9.03 ರಂದು ಬೆಳಿಗ್ಗೆ 11 ಗಂಟೆಗೆ

ಆರೋಪಿಯು ಗ್ಯಾರೇಜಿಗೆ ಭೇಟಿ ನೀಡಿದಾಗ ಅಲ್ಲಿ ಅನ್ವಾರ್ ಎಂಬ ಬಾಲಕ ಸ್ಕೂಟರ್ ತೊಳೆಯುತ್ತಿದ್ದ, ಆತನಿಗೆ ಇವರ ಪರಕ್ಕೆ ನೀಡಿದರು ,ಬಾಲಕನಿಗೆ ಅವನು ಓದುಗುವಾರ ಶಾಲೆಗೆ ಸೇರಿಸಿದರು ಎಂದು ನುಡಿದಿದ್ದಾರೆ. ಇವರ ಸಾಕ್ಷ್ಯದಿಂದ ಇವರು ಭೇಟಿ ನೀಡಿದಾಗ ಆ ಬಾಲಕ ಸ್ಕೂಟರ್ ಸ್ವಚ್ಛಮಾಡುತ್ತಿದ್ದದ್ದು ಸ್ಪಷ್ಟವಾಗುತ್ತದೆ. ಇವರ ಪಾಟೀ ಸವಾಲಿನಲ್ಲಿ ಈ ಆರೋಪಿ ನಡೆಸುತ್ತಿದ್ದ ಗ್ಯಾರೇಜಿನ ಪಕ್ಕ ನಾಗರಕಟ್ಟೆ ಇದೆ, ಅಲ್ಲಿ ಹುಡುಗರು, ಜನರು ಕುಳಿತಿರುತ್ತಾರೆ ಎಂದು ಒಪ್ಪಿದ್ದಾರೆ ಅನ್ವಾರ್ ಸಹ ಅಲ್ಲಿ ಕುಳಿತಿದ್ದ ಆತನಿಂದ ಮಾಹಿತಿ ಪಡೆದು ಸುಳ್ಳು ದೂರು ಸಲ್ಲಿಸಲಾಗಿದೆ ಎಂಬ ಸೂಚನೆಗಳನ್ನು ಇವರು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ. ಅಲ್ಲದೇ ಆರೋಪಿ ಕೇವಲ ದ್ವಿಚಕ್ರವಾಹನಗಳ ರಿಪೇರಿ ಮಾಡುತ್ತಾರೆ. ಅದು ಸಣ್ಣ ಪ್ರಮಾಣದಲ್ಲಿ, ಅವರಿಗೆ ಕೆಲಸದ ಹುಡುಗರು ಬೇಕಾಗುವುದಿಲ್ಲ ಎಂಬ ಸೂಚನೆಗಳೆಲ್ಲವನ್ನೂ ಅಲ್ಲಗಳೆದಿದ್ದಾರೆ. ಒಟ್ಟಾರೆ ಇವರ ಸಾಕ್ಷ್ಯದಿಂದ ಸ್ಪಷ್ಟವಾಗುವುದೇನೆಂದರೆ ದಿ [illegible]-01 ರಂದು ತನಿಖಾ ತಂಡದ ಜೊತೆಗೆ ಇವರು ಆರೋಪಿಯು ಗ್ಯಾರೇಜಿಗೆ ಹೋಗಿದ್ದು ಅಲ್ಲಿ ಬಾಲಕ ಅನ್ವಾರ್ ಕೆಲಸ ಮಾಡುತ್ತಿದ್ದ ಆ ಬಗ್ಗೆ ಕಾರ್ಮಿಕ ನಿರೀಕ್ಷಕರು ತನಿಖಾ ಪತ್ರಿಕೆ ತಯಾರಿಸಿ ಬಾಲಕನ ಹೇಳಿಕೆ ಪಡೆದಿರುವುದು ಸ್ಪಷ್ಟವಾಗುತ್ತದೆ. ಹಾಗಿರುವಾಗ ಈ ಸಾಕ್ಷಿ ಆರೋಪಿಯು ವಿರುದ್ಧ ಏಕೆ ಸುಳ್ಳು ನುಡಿಯುತ್ತಾರೆ? ಎಂಬ ಬಗ್ಗೆ ಆರೋಪಿಯು ಯಾವುದೇ ರಕ್ಷಣಾತ್ಮಕ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲ. ಈ ಕಾರಣದಿಂದ ಪ್ರಾ, ಸಾ 1 ರವರ ಸಾಕ್ಷ್ಯವೂ ಸಹ ನಂಬಲರ್ಹ ಸಾಕ್ಷ್ಯವಾಗಿದೆ ಎಂದು ನನ್ನ ಅಭಿಪ್ರಾಯ.

ಇನ್ನು ಪ್ರಾ, ಸಾ 3 ಸಂಜೀವಯ್ಯ ಇವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ದಿ [illegible]-01 ರಂದು ಬೆಳಿಗ್ಗೆ 11-10ರ ಸಮಯದಲ್ಲಿ ಇವರು ತನಿಖಾ ತಂಡದ ಜೊತೆಗೆ ಆರೋಪಿಯು ಗ್ಯಾರೇಜಿಗೆ ಹೋಗಿದ್ದಾಗ ಅಲ್ಲಿ ಅನ್ವಾರ್ ಎಂಬ ಅಪ್ರಾಪ್ತ ಬಾಲಕ ಕೆಲಸಕ್ಕೆ ಇದ್ದನೆಂದು. ಆತನಿಗೆ ವಿಚಾರಿಸಿದಾಗ ಆ ಬಾಲಕ ಎರಡೂವರೆ ತಿಂಗಳಿನಿಂದ ಅಲ್ಲಿ ಕೆಲಸ ಮಾಡುತ್ತಿದ್ದು ಪ್ರತಿ ದಿನ 10 ರೂ. ಕೂಲಿ ಕೊಡುತ್ತಾರೆಂದು ಹೇಳಿದನೆಂದು ನುಡಿದಿದ್ದಾರೆ. ಇವರ ಪಾಟೀ ಸವಾಲಿನಲ್ಲಿ ಕಂಡು ಬರುವುದೇನೆಂದರೆ, ಆ ಗ್ಯಾರೇಜಿನ ಬಳಿ ಒಂದು ನಾಗರಕಟ್ಟೆ ಇದೆ ಅಲ್ಲಿ ಜನರು ಮತ್ತು ಮಕ್ಕಳು ಇರುತ್ತಾರೆಂದು ಒಪ್ಪಿದ್ದಾರೆ. ಇವರ ಸಾಕ್ಷ್ಯದಿಂದ ಇವರು ತಂಡದ ಜೊತೆಗೆ ಆರೋಪಿಯು ಗ್ಯಾರೇಜಿಗೆ ಭೇಟಿ ನೀಡಿದಾಗ ಅಲ್ಲಿ ಬಾಲಕ ಕೆಲಸ ಮಾಡುತ್ತಿದ್ದುದು ಸ್ಪಷ್ಟವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಬಾಲಕ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ ಸದರಿ ಬಾಲಕ ನಾಗರಕಟ್ಟೆ ಬಳಿ ಆಡುತ್ತಿದ್ದ ಎಂಬ ಬಗ್ಗೆ ತನ್ನ ರಕ್ಷಣಾತ್ಮಕ ನಿಲುವನ್ನು ಸ್ಪಷ್ಟಪಡಿಸಲು

ಆರೋಪಿಯು ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ಹೀಗಾಗಿ ಇವರ ಸಾಕ್ಷ್ಯವೂ ಸಹ ಸ್ಥಿರವಾಗಿದೆ.

ಇನ್ನು ಸಾ. ಸಾ 4 ಡಾ: ರಾಜಾ ಪಠಾಣಿ ಇವರ ಪ್ರಕಾರ ಇವರೂ ಸಹ ಸದರಿ ತಂಡದ ಜೊತೆಗೆ ಗ್ಯಾರೇಜಿಗೆ ಹೋಗಿದ್ದರು ಅಲ್ಲಿ ಅನ್ವಾರ್ ಕೆಲಸ ಮಾಡುತ್ತಿದ್ದ ಬಾಲಕನನ್ನು ಪರೀಕ್ಷೆ ಮಾಡಿ ಅವನ ವಯಸ್ಸಿನ ಬಗ್ಗೆ ನಿ. ಪಿ. 2 ರಂತೆ ಪ್ರಮಾಣ ಪತ್ರ ನೀಡಿದರು, ಅದರಂತೆ ಬಾಲಕನ ವಯಸ್ಸು 9 ವರ್ಷವಾಗಿತ್ತು ಎಂದು ಹೇಳಿದ್ದಾರೆ. ಇವರ ಪಾಟೀ ಸವಾಲಿನಲ್ಲಿ ಬಾಲಕನ ವಯಸ್ಸನ್ನು ಎಕ್ಸ್-ರೇ ಮೂಲಕ ನಿರ್ಧರಿಸಿಲ್ಲ. ಆದರೆ ಬಾಲಕನ ಹಲ್ಲಿನ ಬೆಳವಣಿಗೆಯ ಆಧಾರದಿಂದ ಬಾಲಕನ ವಯಸ್ಸನ್ನು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ. ವೈದ್ಯ ಶಾಸ್ತ್ರದಲ್ಲಿ ಎರಡು ವಿಧದಿಂದ ವಯಸ್ಸನ್ನು ನಿರ್ಧರಿಸಬಹುದಾಗಿದೆ. ಮೊದಲನೆಯದು ದೇಹದ ಮೂಳೆಗಳ ಬೆಳವಣಿಗೆಯ ಆಧಾರದಿಂದ ಅವುಗಳ ಎಕ್ಸ್.ರೇ ಪಡೆದು. ಮತ್ತು ಎರಡನೆಯದಾಗಿ ಹಲ್ಲುಗಳ ಬೆಳವಣಿಗೆಯ ಆಧಾರದಿಂದ. ಇವರು ಹಲ್ಲುಗಳ ಬೆಳವಣಿಗೆ ಆಧಾರದಿಂದ ಬಾಲಕನ ವಯಸ್ಸನ್ನು ನಿರ್ಧರಿಸಿದ ಬಗ್ಗೆ ನುಡಿದಿದ್ದಾರೆ. ಹೀಗಾಗಿ ಸದರಿ ಬಾಲಕನ ವಯಸ್ಸು 14 ವರ್ಷದ ಒಳಗೆ ಅಂದರೆ 9 ವರ್ಷ ವಯಸ್ಸು ಆಗಿದ್ದು ಅಪ್ರಾಪ್ತ ಬಾಲಕ ಆರೋಪಿಯ ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದದ್ದು ಸ್ಪಷ್ಟವಾಗುತ್ತದೆ. ಅಲ್ಲದೇ ಸದರಿ ಗ್ಯಾರೇಜು ಅಪಾಯಕಾರಿ ಸಂಸ್ಥೆಯ ಪಟ್ಟಿಯಲ್ಲಿ ಸಹ ಬರುತ್ತದೆ. ಈ ಕಾರಣದಿಂದ ಇಂತಹ ಗ್ಯಾರೇಜುಗಳಲ್ಲಿ ಅಪ್ರಾಪ್ತ ಬಾಲಕರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವಂತಿಲ್ಲ. ಅದನ್ನು ಈ ಅಧಿನಿಯಮದಡಿಯಲ್ಲಿ ನಿಷೇಧಿಸಲಾಗಿದೆ. ಹಾಗಿರುವಾಗ, ಸ್ಪಷ್ಟವಾಗಿ ಈ ಅಧಿನಿಯಮದ ಕಲಂ 3ರ ವಿಧಿಯನ್ನು ಈ ಆರೋಪಿ ಉಲ್ಲಂಘನೆ ಮಾಡಿದ್ದುದು ಸಾ. ಸಾ 1 ರಿಂದ 4 ನೇದವರ ಸಾಕ್ಷ್ಯದಿಂದ ಸ್ಪಷ್ಟವಾಗುತ್ತದೆ. ಮೇಲಾಗಿ, ಇದನ್ನು ಅಭಿಯೋಜನೆಯು ಒದಗಿಸಿರುವ ದಾಖಲೆಗಳೂ ಸಹ ಸ್ಪಷ್ಟಪಡಿಸುತ್ತವೆ. ಹಾಗಿರುವಾಗ, ಈ ಬಾಲಕನ ವಯಸ್ಸಿನ ಬಗ್ಗೆ ಆರೋಪಿ ಪರ ವಕೀಲರು ವಾದ ಮಂಡಿಸುತ್ತಾ ಈಗಾಗಲೇ ಇನ್ನೊಂದು ಪ್ರಕರಣದಲ್ಲಿ ಈ ಬಾಲಕನಿಗೆ 14 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ ಎಂಬ ಬಗ್ಗೆ ಕಾರ್ಮಿಕ ಆಯುಕ್ತರ ಮುಂದೆ ಸದರಿ ಬಾಲಕನ ಪಾಲಕರು ದಾಖಲೆ ಸಲ್ಲಿಸಿದ್ದಾರೆಂದು ಹೇಳಿದ್ದಾರೆ. ಆದರೆ ಆ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನಾಗಲೀ ಅಂತಹ ದಾಖಲೆಯನ್ನಾಗಲೀ ಹಾಜರುಪಡಿಸಿರುವುದಿಲ್ಲ. ಹಾಗಿರುವಾಗ ಕೇವಲ ಸಾ. ಸಾ 1ರ ಪಾಟೀ ಸವಾಲಿನಲ್ಲಿ ಎಂಥ ಇಂತಹ ಸೂಚನೆಗೆ ಅವರು ಸದರಿ ದಾಖಲೆಯನ್ನು ಯಾವುದೇ ಅಧಿಕೃತ ಪ್ರಾಧಿಕಾರ ನೀಡಿದ್ದಲ್ಲ, ಎಂದು ಹೇಳಿದ್ದಾರೆಯೇ ಹೊರತು ಅದರಲ್ಲಿ 14 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿದ್ದೆಯ ಬಗ್ಗೆ ಸ್ಪಷ್ಟತೆ

ಮಾಡಿಲ್ಲ. ಮೇಲಾಗಿ ಕೇವಲ ಇಂತಹ ಸೂಚನೆ ಹಾಗೂ ವಾದದ ಆಧಾರದಿಂದ ಬಾಲಕನ ವಯಸ್ಸು 14 ವರ್ಷಕ್ಕಿಂತ ಹೆಚ್ಚಾಗಿತ್ತೆಂಬ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ. ಈ ಸಂಬಂಧ ಆರೋಪಿ ಪರ ವಕೀಲರು ವಾದ ಮಂಡಿಸಿದ್ದರೂ ಸಹ ಅದು ಬುನಾದಿ ಇಲ್ಲದ ವಾದ ಮಂಡನೆಯಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರಾ ಸಾ 1 ರಿಂದ 4 ನೇದವರ ಸಾಕ್ಷ್ಯವನ್ನು ಒಡೆದು ಹಾಕುವಂತಹ ಅಥವಾ ನಂಬದ ಇರುವಂತಹ ಯಾವುದೇ ಸಾಕ್ಷ್ಯವನ್ನು ಆರೋಪಿ ಪರ ಒದಗಿಸಿಲ್ಲ. ಈ ಕಾರಣಗಳಿಂದ ಪ್ರಾ ಸಾ 1 ರಿಂದ 4 ನೇದವರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಕಾರಣಗಳು ಇರುವುದಿಲ್ಲ. ಆರೋಪಿ ಬಾಲಕನ ಪಾಲಕರನ್ನು ವಿಚಾರಿಸಿರುವುದಿಲ್ಲ, ಹಾಗೂ ಅತನನ್ನು ದಂ ಪ್ರ ಸಂ. ಕಲಂ 313 ರಡಿಯಲ್ಲಿ ವಿಚಾರಿಸಿದಾಗಲೂ ಸಹ ಆರೋಪಿ ಯಾವುದೇ ಅಂತಹ ವಿಶೇಷವಾದ ಹೇಳಿಕೆ ನೀಡಿಲ್ಲ. ಹೀಗಾಗಿ, ಆರೋಪಿಯ ಪರ ಅಂತಹ ಯಾವುದೇ ಹೇಳಿಕೆಗಳಾಗಲೀ ಅಥವಾ ಸಾಕ್ಷ್ಯ ಪುರಾವೆಗಳಾಗಲೀ ಇಲ್ಲದಿರುವ ಕಾರಣ ಕೇವಲ ಆರೋಪಿಯ ಪರ ಮಂಡಿಸಿದ ವಾದ ಮತ್ತು ಅವರು ಪ್ರಾಸಾ 1 ರಿಂದ 4 ನೇದವರಿಗೆ ಸೂಚಿಸಿದ ಸೂಚನೆಗಳ ಆಧಾರದಿಂದ ಅನ್ವರ್ ಎಂಬ ಬಾಲಕನು ಆರೋಪಿಯ ಗ್ಯಾರೇಜಿನಲ್ಲಿ ಕೆಲಸಕ್ಕೆ ಇರಲಿಲ್ಲ ಎಂಬ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ. ಮೇಲಾಗಿ ಪ್ರಾ ಸಾ 1 ರಿಂದ 4 ನೇದವರು ಯಾವುದೇ ರೀತಿಯಿಂದ ಆರೋಪಿಯ ಜೊತೆಗೆ ವ್ಯವಹರಿಸಿದ ವ್ಯಕ್ತಿಗಳಾಗಿಲ್ಲ. ಅವರ ಮಧ್ಯ ಯಾವುದೇ ಸಂಬಂಧವಾಗಲೀ ದ್ವೇಷವಾಗಲೀ ಇರುವುದಿಲ್ಲ. ಇಂತಹ ವ್ಯಕ್ತಿಗಳು ಆರೋಪಿಯ ವಿರುದ್ಧ ಏಕೆ ಸುಳ್ಳು ನುಡಿಯುತ್ತಾರೆ? ಹಾಗೆ ಸುಳ್ಳು ಹೇಳುತ್ತಿದ್ದರೆ ಅದಕ್ಕೆ ಕಾರಣ ಏನು? ಎಂಬ ಬಗ್ಗೆ ಆರೋಪಿಯಿಂದ ಯಾವುದೇ ವಿವರಣೆ ಇಲ್ಲ. ಹಾಗೂ ಆರೋಪಿ ಪ್ರಾ ಸಾ 1 ರಿಂದ 4 ನೇದವರ ಪಾಟೀ ಸವಾಲಿನಲ್ಲಿ ಸಹ ಈ ಬಗ್ಗೆ ಏನನ್ನೂ ಸೂಚಿಸಿರುವುದಿಲ್ಲ. ಹೀಗಾಗಿ, ಪ್ರಾ ಸಾ 1 ರಿಂದ 4 ನೇದವರ ಸಾಕ್ಷ್ಯವನ್ನು ಕಡೆಗಣಿಸಲು ಬರುವುದಿಲ್ಲ ಇದಕ್ಕೆ ವ್ಯತಿರಿಕ್ತವಾಗಿ ಅವರುಗಳ ಸಾಕ್ಷ್ಯವು ಕಾನೂನಿನಡಿಯಲ್ಲಿ ಸ್ಥಿರವಾಗಿ ನಿಂತಿದೆ. ಈ ಕಾರಣಗಳಿಂದ ನನ್ನ ಅಭಿಪ್ರಾಯದಲ್ಲಿ ಅಭಿಯೋಜನೆಯು ಆರೋಪಿಯ ವಿರುದ್ಧದ ಆಪಾದನೆಯನ್ನು ನಿಸ್ಸಂಶಯವಾಗಿ ಸಾಬೀತುಪಡಿಸಿರುವ ಕಾರಣ 1ನೇ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

ಅಂಶ 2 :- ಈ ಮೇಲೆ ಚರ್ಚಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 153(2) ರಡಿಯಲ್ಲಿ ವರ್ತಿಸುತ್ತಾ, ಆರೋಪಿಯನ್ನು ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986

Court of the Judicial Magistrate First Class ... Harapanahalli

ನಿಯಮ 1993ರ ಕಲಂ 3ರ ಉಲ್ಲಂಘನೆ ಮಾಡಿ ಸದರಿ ಕಾಯ್ದೆ ಕಲಂ 14(1) ರಡಿಯಲ್ಲಿ ದಂಡಿಸಬಹುದಾದ ಅಪರಾಧವೆಸಗಿರುವುದಕ್ಕಾಗಿ ತಪ್ಪಿತಸ್ಥನೆಂದು ಘೋಷಿಸಿ, ಸದರಿ ಕೃತ್ಯವೆಸಗಿರುವುದಕ್ಕಾಗಿ ಆರೋಪಿಗೆ 3 ತಿಂಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದೆ.

ಆರೋಪಿಯ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಬರೆಸಲ್ಪಟ್ಟು ಆದ ನಂತರ ತಿದ್ದುಪಡಿ ಮಾಡಿ ತೆರೆದನ್ಯಾಯಾಲಯದಲ್ಲಿ ದಿ 8-9-05 ರಂದು ಘೋಷಿಸಿದೆ)

Sd/-
(ಉಮೇಶ್ ಮೂಲಿಮನಿ)
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹರಪನಹಳ್ಳಿ.

ಅನುಬಂಧ

ಅಭಿಯೋಜನೆಯ ಪರವಾಗಿ ಪರೀಕ್ಷಿಸಿದ ಸಾಕ್ಷಿದಾರರ ಪಟ್ಟಿ

ಪ್ರಾ.ಸಾ.1. ಮಹಮದ್ ಅಕ್ರಮ್

ಪ್ರಾ.ಸಾ.2. ಮಂಜುನಾಥ

ಪ್ರಾ.ಸಾ.3. ಸಂಜೀವಯ್ಯ

ಪ್ರಾ.ಸಾ.4. ಡಾ ರಾಜಾ ಸೂಲಿಬಿ

ಅಭಿಯೋಜನೆಯ ಪರ ಗುರುತಿಸಿದ ದಾಖಲೆಗಳಪಟ್ಟಿ

ನಿಶಾನೆ ಪಿ.1. ತನಿಖಾ ಪಟ್ಟಿ1(ಎ) ಯಿಂದ (ಬಿ) ಸಹಿಗಳು

ನಿಶಾನೆ ಪಿ.2. ವಯಸ್ಸಿನ ಪ್ರಮಾಣಪತ್ರ, 2(ಎ) ಸಹಿ

ನಿಶಾನೆ ಪಿ.3. ಬಾಲಕಾರ್ಮಿಕನ ಹೇಳಿಕೆ 3(ಎ) ರಿಂದ (ಇ) ಸಹಿಗಳು

ನಿಶಾನೆ ಪಿ.4 ದೂರು 4(ಎ)ಸಹಿಕಚೇರಿಯ ಜ್ಞಾಪನಾ ಪತ್ರ,

ಆರೋಪಿ ಪರ - ಇಲ್ಲ -

Sd/-
ಪ್ರ.ದ.ನ್ಯಾ.ದಂಡಾಧಿಕಾರಿಗಳು
ಹರಪನಹಳ್ಳಿ,

— True copy —



Examiner